ವಯಸ್ಸಿನವರೆಗಿನ ಸಂಗೀತಾಸಕ್ತರು ಶಿಬಿರದಲ್ಲಿ ಪಾಲ್ಗೊಳ್ಳುವುದು ಇಲ್ಲಿನ ವಿಶೇಷ.

## ನಿಸರ್ಗ ಸಿರಿಯಲ್ಲಿ ನಾದಧಾರೆ

'ಒಂದೆಡೆ ಹಕ್ಕಿಗಳ ಇಂಚರ, ಇನ್ನೊಂದೆಡೆ ರಾಗ ತಾಳಗಳನ್ನೊಳಗೊಂಡ ಸ್ವರ ಸಂಚಾರ. ನಗರ ಪ್ರದೇಶಕ್ಕಿಂತ ತುಂಬಾ ದೂರದಲ್ಲಿರುವ ಅಪ್ಪಟ ಹಳ್ಳಿಯಲ್ಲಿ ನಡೆಯುವ ಕರುಂಬಿತ್ತಿಲ್ ಸಂಗೀತ ಶಿಬಿರದಲ್ಲಿ ಭಾಗವಹಿಸುವುದೇ ಒಂದು ರೀತಿಯ ಪುಳಕ. ಜಗತ್ತಿನಾದ್ಯಂತ ಕಲಾವಿದರನ್ನು ಸೆಳೆಯುವ ಈ 'ಸಂಗೀತ ಸಮಾರಾಧನೆ' ನಿಜಕ್ಕೂ ಒಂದು ಹಬ್ಬವೇ' ಎಂದು ಹೇಳುತ್ತಾರೆ ಖ್ಯಾತ ಗಾಯಕಿ ಬಾಂಬೆ ಜಯಶ್ರೀ.


'ಜನವರಿಯಲ್ಲಿ ತಿರುವಯ್ಯಾರಿನಲ್ಲಿ ನಡೆಯುವ ತ್ಯಾಗರಾಜರ ಆರಾಧನೆಯಲ್ಲಿ ವರ್ಷಂಪ್ರತಿ ಭಾಗವಹಿಸುತ್ತೇನೆ. ದೂರದ ಅಮೆರಿಕದಲ್ಲಿ ಏಪ್ರಿಲ್‌ನಲ್ಲಿ ನಡೆಯುವ 'ಕ್ಲೀವ್‌ಲ್ಯಾಂಡ್ ಸಂಗೀತೋತ್ಸವ' ರಸಿಕರಿಗೆ ಮತ್ತೊಂದು ಹಬ್ಬ. ಅದೇ ರೀತಿ ಮೇ ತಿಂಗಳಲ್ಲಿ ಕರುಂಬಿತ್ತಿಲ್ ಸಂಗೀತ ಶಿಬಿರ ಕಲಾರಸಿಕರ ಮನಸ್ಸಿಗೆ ನೀಡುವ ಅದ್ಭುತ ರಸಕವಳ. ಇಲ್ಲಿ ಪಾಲ್ಗೊಂಡು ಸಂಗೀತ ಆರಾಧಿಸಿ ಆಸ್ವಾದಿಸುವುದು ನಮ್ಮೆಲ್ಲರ ಸುಯೋಗ' ಎಂದು ಹೇಳುತ್ತಾರೆ ಈ ಗಾಯಕಿ.

## ಮಕ್ಕಳಲ್ಲಿ ಸದ್ಭಾವನೆ ಬೆಳೆಯಲಿ

'ಕರುಂಬಿತ್ತಿಲ್ ಸಂಗೀತ ಶಿಬಿರದಲ್ಲಿ ನಾನೂ ಪಾಲ್ಗೊಂಡಿದ್ದೆ. ಅದು ಇಂದಿಗೂ ಎಂದೆಂದಿಗೂ ನನ್ನ ಮನದಾಳದಲ್ಲಿ ಉಳಿದುಬಿಡುವ ಸಂಗತಿ. ತುಂಬಾ ಸುಂದರವಾದ ಕಣಿವೆಯ ಮಧ್ಯದಲ್ಲಿರುವ ಆ ಮನೆ, ಆ ಮನೆಯಲ್ಲಿ ನಡೆಯುವ ಸಂಗೀತ ಶಿಬಿರಕ್ಕೆ ಇಷ್ಟೊಂದು ಮಕ್ಕಳು ಭಾಗವಹಿಸಲು ಬರುತ್ತಾರೆಂದರೆ ನಂಬಲಾಗದು. ಬೇರೆ ಬೇರೆ ಸಮುದಾಯಗಳ ಮಕ್ಕಳು ಪಾಲ್ಗೊಂಡು ಸಂಗೀತದಲ್ಲಿ ಆಸಕ್ತಿ ಬೆಳೆಸಿಕೊಳ್ಳುವುದೊಂದಾದರೆ, ಪರಸ್ಪರ ಪರಿಚಯ ಮತ್ತು ಅರಿತು ಬಾಳುವುದು ಇನ್ನೊಂದು ಸೋಜಿಗ. ಈ ಶಿಬಿರದಲ್ಲಿ ಸಂಗೀತದ ಮೇಲೆ ಹುಟ್ಟಿಕೊಳ್ಳುವ ಆಸಕ್ತಿ ಅಥವಾ ಶ್ರದ್ಧೆಯೇ ಮಕ್ಕಳಲ್ಲಿ ಸದ್ಭಾವನೆ ಮೂಡಿಸಲು ಸಹಕಾರಿಯಾಗುತ್ತದೆ. ಇದು ವಿಠಲ್ ಮತ್ತು ಅವರ ಕುಟುಂಬದವರು ಸಮಾಜಕ್ಕೆ ನೀಡುವ ಬಹುದೊಡ್ಡ ಕೊಡುಗೆಯೇ ಆಗಿದೆ. ಇಂಥ ಸಂಗೀತ ಶಿಬಿರ ನಿರಂತರವಾಗಿ ನಡೆಯಬೇಕು. ವಿಠಲ್ ಕರೆದಾಗಲೆಲ್ಲ ಬರುವುದಕ್ಕೆ ನಾನು ಸಿದ್ಧ' ಎಂದು ಹೇಳುತ್ತಾರೆ ಕರ್ನಾಟಕ ಸಂಗೀತದ ಮತ್ತೊಬ್ಬ ವಿದ್ವಾಂಸ ಚೆನ್ನೈಯ ಟಿ.ಎಂ. ಕೃಷ್ಣ.

## ಬೆಳ್ಳಿಹಬ್ಬದ ಸಂಭ್ರಮದಲ್ಲಿ...

ಈ ವರ್ಷ ತನ್ನ 25ನೇ ವಾರ್ಷಿಕೋತ್ಸವವನ್ನು ಆಚರಿಸಿಕೊಳ್ಳುತ್ತಿರುವ 'ಕರುಂಬಿತ್ತಿಲ್ ಶಿಬಿರ' ಮೇ 20ರಿಂದ 25ರವರೆಗೆ ನಡೆಯಲಿದೆ. ಹಿಂದಿನ ವರ್ಷಗಳಿಗಿಂತ ಈ ವರ್ಷ ಹಲವು ವಿಶೇಷಗಳೊಂದಿಗೆ ವಿಭಿನ್ನವಾಗಿ ಮೂಡಿಬರಲು ವೇದಿಕೆ ತಯಾರಾಗಿದೆ. ಈ ವರ್ಷದ ಶಿಬಿರದಲ್ಲಿ ವಿದುಷಿ ಆರ್‌ಎನ್‌ ಶ್ರೀಲತಾ, ನೈವೇಲಿ ಸಂತಾನಗೋಪಾಲನ್‌, ವಿದ್ಯಾಭೂಷಣ ಮೊದಲಾದವರ ಗಾಯನವಿದೆ. ಶಾಂತಲಾ, ಶಶಾಂಕ ಸುಬ್ರಹ್ಮಣ್ಯಂ ಅವರಿಂದ ಕೊಳಲು, ನಾ.ದೇ. ಮುರಳೀಧರನ್‌, ಪಿ.ಎಸ್‌ ಗೋಕುಲ್ ಅವರಿಂದ ಪಿಟೀಲು ವಾದನ, ಶ್ರೀಮುಷ್ಣಂ ರಾಜಾರಾವ್‌, ಅರ್ಜುನಕುಮಾರ್ ಅವರಿಂದ ಮೃದಂಗ ಕಾರ್ಯಕ್ರಮವಿದೆ. ಶಿವಮೊಗ್ಗದ ಹೊಸಹಳ್ಳಿ ವೆಂಕಟ್ರಾಮ್ (ವಿಠಲ್ ರಾಮಮೂರ್ತಿ ಅವರ ಗುರು) ಅವರಿಗೆ ಸನ್ಮಾನ, ಹಳೆಯ ವಿದ್ಯಾರ್ಥಿಗಳಿಗೆ ಗೌರವ ಸಮರ್ಪಣೆ, 25 ವರ್ಷಗಳಿಂದ ಸಂಗೀತ ಶಿಬಿರಕ್ಕೆ ಒಂದಿಲ್ಲೊಂದು ಸಹಕಾರ ನೀಡಿದವರಿಗೆ ಸನ್ಮಾನ... ಮುಂತಾದವು ಈ ವರ್ಷದ ಶಿಬಿರದ ಹೈಲೈಟ್ಸ್.



ಕರುಂಬಿತ್ತಿಲ್ ಶಿಬಿರದಲ್ಲಿ ವಿಠ್ಠಲ ರಾಮಮೂರ್ತಿ


## ಶಿಬಿರದ ರೂವಾರಿ

ಸಂಗೀತದ ಮನೆಯಲ್ಲೇ ಜನಿಸಿದ ವಿಠಲ ರಾಮಮೂರ್ತಿ ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಸಂಗೀತವನ್ನು ಕಲಿತು ಶಿವಮೊಗ್ಗದ ಹೊಸಹಳ್ಳಿ ವೆಂಕಟ್ರಾಮ್ ಅವರ ಬಳಿ ವಯೊಲಿನ್ ತಾಲೀಮು ನಡೆಸಿದವರು. ಮುಂದೆ ಚೆನ್ನೈಯಲ್ಲಿ ಟಿ. ರುಕ್ಮಿಣಿ ಹಾಗೂ ಲಾಲ್ಗುಡಿ ಜಯರಾಮನ್ ಅವರ ಬಳಿ ಪಿಟೀಲಿನ ಉನ್ನತ ಅಭ್ಯಾಸ ಮಾಡಿದವರು. ಪಿಟೀಲಿನ ಎಳೆಎಳೆಯಲ್ಲೂ ಕರ್ನಾಟಕ ಸಂಗೀತದ ರಾಗಾಲಾಪ, ಸ್ವರಪ್ರಸ್ತಾರ, ಚಿಟ್ಟೆಸ್ವರಗಳು ಮಾರ್ದನಿಸತೊಡಗಿದ ಮೇಲೆ ವಿಠಲ ರಾಮಮೂರ್ತಿ ದೇಶ ವಿದೇಶಗಳಲ್ಲಿ ವಯೊಲಿನ್ ಸಿರಿಯನ್ನು ಅನಾವರಣಗೊಳಿಸಲಾರಂಭಿಸಿದರು.

ಹಲವಾರು ಪ್ರಶಸ್ತಿಗಳಿಗೂ ಭಾಜನರಾದ ವಿಠಲ ರಾಮಮೂರ್ತಿ ಅವರಿಗೆ ಅಮೆರಿಕದಲ್ಲೂ ಪ್ರತಿಷ್ಠಿತ ಸಂಗೀತ ಪ್ರಶಸ್ತಿಗಳು ಒಲಿದಿವೆ. ಅವರ ವಿದ್ವತ್ಪೂರ್ಣ ವಾದನ ಗಮನಿಸಿದ ಅಮೆರಿಕ ಸರ್ಕಾರ, ಅರಿಜೋನಾದಲ್ಲಿ ನವೆಂಬರ್ 5ರ ದಿನವನ್ನು 'ವಿಠಲ ರಾಮಮೂರ್ತಿ ದಿನ' ಎಂದು ಆಚರಿಸಲು ಘೋಷಣೆ ಮಾಡಿದೆ. ಇದು ಕಲಾವಿದರೊಬ್ಬರಿಗೆ ಜೀವಮಾನದಲ್ಲಿ ಸಿಗುವ ಅತ್ಯಂತ ಅಪರೂಪದ ಮನ್ನಣೆ.

ಒಬ್ಬ ಕಲಾವಿದ ತಾನು ಬೆಳೆದರೆ ಸಾಲದು, ತಮ್ಮ ಹಳ್ಳಿಯ, ನಾಡಿನ ಸಂಗೀತಾಸಕ್ತ ಮಕ್ಕಳೂ ನಾದವನ್ನು ಆಸ್ವಾದಿಸಬೇಕು ಎಂಬ ತುಡಿತ ಹೊಂದಿರಬೇಕು ಎಂಬುದಕ್ಕೆ ವಿಠಲ ರಾಮಮೂರ್ತಿ ನಿದರ್ಶನ. ಹುಟ್ಟಿದ ಹಳ್ಳಿಯಲ್ಲಿ ಸಂಗೀತದ ಓಂಕಾರ, ಝೇಂಕಾರ ಅಲೆಅಲೆಯಾಗಿ ತೇಲಿಬರಬೇಕು, ಮಕ್ಕಳಲ್ಲಿ ಸಂಗೀತದ ಅಭಿರುಚಿ ಹೆಚ್ಚಿಸಬೇಕು ಎಂಬ ಕಾರಣಕ್ಕಾಗಿ ನಿಡ್ಲೆ ಸಮೀಪದ ತಮ್ಮ ಕರುಂಬಿತ್ತಿಲ್ ಮನೆಯಲ್ಲಿ ಪತ್ನಿ ವಿದುಷಿ ರಾಜರಾಜೇಶ್ವರಿ ಅವರೊಂದಿಗೆ ರಾಮಮೂರ್ತಿ ಸಂಗೀತ ಶಿಬಿರ ಆಯೋಜಿಸಲು ಆರಂಭಿಸಿದರು. ಆ ನಾದಲೀಲೆಗೀಗ 25ನೇ ವರ್ಷದ ಸಂಭ್ರಮ.

ಪ್ರತಿಕ್ರಿಯಿಸಿ: feedback@sudha.co.in



ಕಳೆದ ವರ್ಷ ನಡೆದ ಸಂಗೀತ ಶಿಬಿರದಲ್ಲಿ ಭಾಗವಹಿಸಿದ ಮಕ್ಕಳು